2016 ಕ.ತೀ.ವ 854

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

ಶ್ರೀ ಸಿ.ಪಿ. ಸುಂದರ್ ರಾಜ್ –ವಿರುದ್ಧ– ಶ್ರೀಮತಿ ನೇತ್ರಾವತಿ ಮತ್ತು ಇನ್ನೊಬ್ಬರು*

ಕಾರ್ಮಿಕರ ನಷ್ಟಪರಿಹಾರ ಅಧಿನಿಯಮ, 1923ರ 30ನೇ ಪ್ರಕರಣದ ಮೇರೆಗೆ ನಿಯತ ಮೊದಲ ಅಪೀಲು.

ಅಪೀಲುದಾರನು ಮೃತ ಪರಮೇಶ್ವರಪ್ಪನ ಉದ್ಯೋಗದಾತನಾಗಿದ್ದಾನೆ. ಅವನು ದಿನಾಂಕ 07.06.2007ರಿಂದ ನಗದೀಕರಣಗೊಳ್ಳುವವರೆಗೆ ಪರಿಣಾಮಕಾರಿಯಾಗುವಂತೆ ವಾರ್ಷಿಕ ಶೇ.7.5 ರಷ್ಟು ಬಡ್ಡಿಯೊಂದಿಗೆ 3,17,290/– ರೂ. ಮೊತ್ತದ ನಷ್ಟ ಪರಿಹಾರವನ್ನು ನೀಡುವಂತೆ ಕಾರ್ಮಿಕರ ನಷ್ಟಪರಿಹಾರದ ಆಯುಕ್ತರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923ರ 30ನೇ ಪ್ರಕರಣದ ಅಡಿಯಲ್ಲಿ ಈ ಅಪೀಲನ್ನು ಸಲ್ಲಿಸಿದ್ದಾನೆ.

ಪರಮೇಶ್ವರಪ್ಪನು 228ನೇ ಸಂಖ್ಯೆಯ ರೈಲಿನಲ್ಲಿ ಕಡೂರಿನಿಂದ ಅರಸೀಕೆರೆಗೆ ಪ್ರಯಾಣಿಸುತ್ತಿದ್ದಾಗ ಅಪಘಾತಕ್ಕೆ ಒಳಗಾಗಿದ್ದಾನೆ. ಇಲ್ಲಿನ ಕ್ಲೇಮುದಾರರು ಮೃತನ ಪತ್ನಿ ಮತ್ತು ಅಪ್ರಾಪ್ತ ಮಗುವಾಗಿದ್ದು, ಅವನ ಅವಲಂಬಿತರಾಗಿದ್ದಾರೆ. ಸದರಿ ದುರ್ದಿನದಂದು, ಮೃತನು ರೈಲಿನಲ್ಲಿ ಪ್ರಯಾಣಿಸುತ್ತಿದ್ದನು. ರೈಲಿನ ಹಠಾತ್ ಎಳೆತ ಮತ್ತು ಕುಲುಕಾಟದಿಂದಾಗಿ ಅವನು ಸಮತೋಲನ ಕಳೆದುಕೊಂಡು ಚಲಿಸುತ್ತಿರುವ ರೈಲಿನಿಂದ ಕೆಳಗೆ ಬಿದ್ದನು. ಹಾಗೆ ಬಿದ್ದ ಕಾರಣದಿಂದಾಗಿ ಅವನಿಗೆ ಗಂಭೀರ ಗಾಯಗಳುಂಟಾದವು ಹಾಗೂ ಅವನು ಸ್ಥಳದಲ್ಲೇ ಮೃತಪಟ್ಟನು. ಆ ಕಾರಣದಿಂದಾಗಿ ಆತನ ಕ್ಲೇಮುದಾರು ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಇವರು ರೈಲ್ವೇ ಕ್ಲೇಮುಗಳ ನ್ಯಾಯಾಧಿಕರಣದಲ್ಲಿ ಕ್ಲೇಮು ಪಡೆದುಕೊಂಡಿರುತ್ತಾರೆ. ಪುನಃ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರ ಮುಂದೆ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ.

*ಎಂ.ಎಫ್.ಎ.ಸಂ. 8447/2012, ದಿನಾಂಕ: 15ನೇ ಸೆಪ್ಟೆಂಬರ್, 2015.

**ಯಾರೇ ವ್ಯಕ್ತಿಯು ಒಂದೇ ಅಪಘಾತಕ್ಕೆ ಸಂಬಂಧಿಸಿದಂತೆ, ಒಂದಕ್ಕಿಂತ ಹೆಚ್ಚು ಬಾರಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಅರ್ಹನಾಗತಕ್ಕದ್ದಲ್ಲ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಕ್ಲೇಮುದಾರರು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದಡಿ ನಷ್ಟಪರಿಹಾರವನ್ನು ಈಗಾಗಲೇ ಕ್ಲೇಮು ಮಾಡಿದ್ದಲ್ಲಿ, ಮತ್ತು ಅದನ್ನು ಪಡೆದಿದ್ದಲ್ಲಿ, ಅವರು ರೈಲ್ವೆ ಅಧಿನಿಯಮ, 1989ರಡಿ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಕ್ಲೇಮನ್ನು ಸಮರ್ಥಿಸಲಾಗುವುದಿಲ್ಲ. ಅದೇ ರೀತಿಯಲ್ಲಿ, ಅದೇ ತರ್ಕದಿಂದ, ರೈಲ್ವೆ ಅಧಿನಿಯಮದ ಉಪಬಂಧಗಳಡಿ ನಷ್ಟ ಪರಿಹಾರಕ್ಕಾಗಿ ಕಾರ್ಮಿಕ ಅಥವಾ ಅವರ ಅವಲಂಬಿತರು ರೈಲ್ವೆ ಅಧಿನಿಯಮದಡಿ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಈಗಾಗಲೇ ಕ್ಲೇಮು ಮಾಡಿದ್ದಲ್ಲಿ, ಮತ್ತೊಮ್ಮೆ ನಷ್ಟ ಪರಿಹಾರವನ್ನು ಪಡೆಯಲು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ಉಪಬಂಧಗಳಡಿ ಅದೇ ಅಪಘಾತಕ್ಕೆ ಸಂಬಂಧಿಸಿ ಮತ್ತೊಂದು ಕ್ಲೇಮು ಮಾಡಲು ಅವರಿಗೆ ಅನುಮತಿಸಲಾಗದು ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅಪೀಲನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

1. *ಎಐಆರ್ 1965 ಮೈಸೂರು 306 (ಸಂ. 52 ಖ.80)*
*ಶ್ರೀಮತಿ ಜೈಬುನ್ನೀಸಾ –ವಿರುದ್ಧ–*
*ವಿಭಾಗೀಯ ಅಧೀಕ್ಷಕರು, ದಕ್ಷಿಣ ರೈಲ್ವೆ, ಹುಬ್ಬಳ್ಳಿ (ಉಲ್ಲೇ) 7*

ಅಪೀಲುದಾರರ ಪರ: ಶ್ರೀ ವಿ.ಎಸ್. ನಾಯಕ್ ವಕೀಲರು.
1ನೇ ಪ್ರತ್ಯಪೀಲುದಾರರ ಪರ: ಶ್ರೀ ಸಂಗಮೇಶ್ ಆರ್.ಬಿ., ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

1. ಅಪೀಲುದಾರನು ಮೃತ ಪರಮೇಶ್ವರಪ್ಪನ ಉದ್ಯೋಗದಾತನಾಗಿದ್ದಾನೆ. ಅವನು ದಿನಾಂಕ 07.06.2007ರಿಂದ ನಗದೀಕರಣಗೊಳ್ಳುವವರೆಗೆ

ಪರಿಣಾಮಕಾರಿಯಾಗುವಂತೆ ವಾರ್ಷಿಕ ಶೇ.7.5 ರಷ್ಟು ಬಡ್ಡಿಯೊಂದಿಗೆ 3,17,290/– ರೂ. ಮೊತ್ತದ ನಷ್ಟ ಪರಿಹಾರವನ್ನು ನೀಡುವಂತೆ ಕಾರ್ಮಿಕರ ನಷ್ಟಪರಿಹಾರದ ಆಯುಕ್ತರು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮ, 1923ರ 30ನೇ ಪ್ರಕರಣದ ಅಡಿಯಲ್ಲಿ ಈ ಅಪೀಲನ್ನು ಸಲ್ಲಿಸಿದ್ದಾನೆ.

2. ಇದರಲ್ಲಿ ಒಳಗೊಂಡಿರುವ ಸಂಗತಿಗಳು, ಪರಮೇಶ್ವರಪ್ಪನು 228ನೇ ಸಂಖ್ಯೆಯ ರೈಲಿನಲ್ಲಿ ಕಡೂರಿನಿಂದ ಅರಸೀಕೆರೆಗೆ ಪ್ರಯಾಣಿಸುತ್ತಿದ್ದಾಗ ಅಪಘಾತಕ್ಕೆ ಒಳಗಾಗಿದ್ದಾನೆ. ಇಲ್ಲಿನ ಕ್ಲೇಮುದಾರರು ಮೃತನ ಪತ್ನಿ ಮತ್ತು ಅಪ್ರಾಪ್ತ ಮಗುವಾಗಿದ್ದು ಅವನ ಅವಲಂಬಿತರಾಗಿದ್ದಾರೆ. ಸದರಿ ದುರ್ದಿನದಂದು, ಮೃತನು ರೈಲಿನಲ್ಲಿ ಪ್ರಯಾಣಿಸುತ್ತಿದ್ದನು. ರೈಲಿನ ಹಠಾತ್ ಎಳೆತ ಮತ್ತು ಕುಲುಕಾಟದಿಂದಾಗಿ ಅವನು ಸಮತೋಲನ ಕಳೆದುಕೊಂಡು ಚಲಿಸುತ್ತಿರುವ ರೈಲಿನಿಂದ ಕೆಳಗೆ ಬಿದ್ದನು. ಹಾಗೆ ಬಿದ್ದ ಕಾರಣದಿಂದಾಗಿ ಅವನಿಗೆ ಗಂಭೀರ ಗಾಯಗಳುಂಟಾದವು ಹಾಗೂ ಅವನು ಸ್ಥಳದಲ್ಲೇ ಮೃತಪಟ್ಟನು ಎಂಬುದನ್ನು ಬಹಿರಂಗ ಪಡಿಸುತ್ತವೆ.

3. ಇದರಲ್ಲಿ ಅಪೀಲುದಾರನ ಹತ್ತಿರ ಮೃತನು ನೌಕರನಾಗಿದ್ದಾಗ ಮತ್ತು ನೌಕರಿಯ ಅವಧಿಯಲ್ಲಿ ಅಪಘಾತ ಸಂಭವಿಸಿದೆ ಮತ್ತು ಆದುದರಿಂದ ಮೃತನ ಅವಲಂಬಿತರಾಗಿರುವ ಕ್ಲೇಮುದಾರರು ನಷ್ಟ ಪರಿಹಾರಕ್ಕೆ ಅರ್ಹರಾಗಿದ್ದಾರೆಂದು ಇತರ ವಿಷಯಗಳೊಂದಿಗೆ ವಾದಿಸಿ ಕ್ಲೇಮು ಅರ್ಜಿಯನ್ನು ಸಲ್ಲಿಸಲಾಗಿದೆ. ವಾಸ್ತವವಾಗಿ ಮೃತ ಪರಮೇಶ್ವರಪ್ಪನು ಅಪೀಲುದಾರನ ಅಧೀನದಲ್ಲಿ ಗುಮಾಸ್ತನಾಗಿ ಕೆಲಸ ಮಾಡುತಿದ್ದನೆಂದು ಹಾಗೂ ಅವನ ನೌಕರಿಯ ಅವಧಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿರುತ್ತಾನೆಂದು ಆಯುಕ್ತರಿಗೆ ಕಂಡುಬಂದಿದೆ.

4. ಅಪೀಲುದಾರನ ಪರ ಮಾನ್ಯ ವಕೀಲರಾದ ಶ್ರೀ ವಿ.ಎಸ್. ನಾಯಕ್ ರವರು ಮಂಡಿಸಿದ ಮುಖ್ಯವಾದ ವಾದವೆಂದರೆ, ಇದರಲ್ಲಿ ಕ್ಲೇಮುದಾರರು – ಪ್ರತ್ಯಪೀಲುದಾರರು ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಬೆಂಗಳೂರು ನ್ಯಾಯಪೀಠದ ಸಮಕ್ಷಮದಲ್ಲಿ ಒ.ಎ.ಸಂ.91/2007ರಲ್ಲಿ ಈಗಾಗಲೇ ಕ್ಲೇಮು ಅರ್ಜಿಯನ್ನು

ಸಲ್ಲಿಸಿರುತ್ತಾರೆ ಮತ್ತು ನ್ಯಾಯಾಧಿಕರಣವು ದಿನಾಂಕ 14.8.2009ರ ತನ್ನ ತೀರ್ಪಿನಲ್ಲಿ ಮೃತನು ರೈಲಿನಲ್ಲಿ ನಿಜವಾದ ಪ್ರಯಾಣಿಕನಾಗಿದ್ದನೆಂದು ಹಾಗೂ ದುರದೃಷ್ಟಕರ ಘಟನೆಯಲ್ಲಿ ಮೃತಪಟ್ಟಿರುತ್ತಾನೆಂದು ನಿರ್ಣಯವನ್ನು ದಾಖಲಿಸುವ ಮೂಲಕ ಅವನ ಕ್ಲೇಮುದಾರರಿಗೆ 4,00,000/– ರೂ. ಮೊತ್ತದ ನಷ್ಟ ಪರಿಹಾರವನ್ನು ನೀಡಿರುತ್ತದೆ. ನ್ಯಾಯಾಧಿಕರಣವು ಹೊರಡಿಸಿದ ದಿನಾಂಕ 14.08.2009ರ ಆದೇಶದ ಪ್ರತಿಯನ್ನು ನ್ಯಾಯಾಲಯದ ಅವಗಾಹನೆಗಾಗಿ ಮಂಡಿಸಲಾಗಿದೆ.

5. ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದ ಉಪಬಂಧಗಳ ಅನುಸಾರ ಸಲ್ಲಿಸಲಾದ ಎರಡನೇ ಕ್ಲೇಮು ಸಮರ್ಥನೀಯವಲ್ಲವೆಂದು ಅವರು ಮಂಡಿಸಿದ್ದಾರೆ. ವಾಸ್ತವವಾಗಿ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಕ್ಲೇಮು ಅರ್ಜಿ ಸಲ್ಲಿಕೆ ಮತ್ತು ಅದರಲ್ಲಿ ಹೊರಡಿಸಿದ ಐತೀರ್ಪು ಕ್ಲೇಮುದಾರರ – ಪ್ರತ್ಯಪೀಲುದಾರರ ಪರ ಮಾನ್ಯ ವಕೀಲರಾದ ಶ್ರೀ ಸಂಗಮೇಶ್ ರಿಂದ ವಿವಾದಿತವಾಗಿಲ್ಲ. ಆದುದರಿಂದ ಈ ಕೆಳಗಿನ ಮುಖ್ಯವಾದ ಕಾನೂನು ಪ್ರಶ್ನೆಯನ್ನು ಪರ್ಯಾಲೋಚಿಸಲು ಈ ಅಪೀಲನ್ನು ಅಂಗೀಕರಿಸಲಾಗಿದೆ:

> "ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣವು ರೈಲ್ವೆ ಅಧಿನಿಯಮ, 1989ರ (1989ರ ಅಧಿನಿಯಮ ಸಂಖ್ಯೆ 24) ಉಪಬಂಧಗಳಡಿ ಹೊರಡಿಸಿದ ಐತೀರ್ಪನ್ನು ಅನುಸರಿಸಿ ಕಾರ್ಮಿಕರ ಅಧಿನಿಯಮದ ಉಪಬಂಧಗಳಡಿ ಪುನಃ ಕ್ಲೇಮುದಾರರಿಗೆ ನಷ್ಟಪರಿಹಾರವನ್ನು ನೀಡುವ ಕಾರ್ಮಿಕರ ನಷ್ಟಪರಿಹಾರದ ಆಯುಕ್ತರು ಹೊರಡಿಸಿದ ಆದೇಶವು ಕಾನೂನಿನಲ್ಲಿ ಸಮರ್ಥನೀಯವಾಗಿದೆಯೇ?"

6. ರೈಲ್ವೆ ಅಧಿನಿಯಮ, 1989ರ 128ನೇ ಪ್ರಕರಣದ ಅನುಸಾರ, 124ನೇ ಪ್ರಕರಣ ಅಥವಾ 124ಎ ಪ್ರಕರಣದಡಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಯಾವುದೇ ವ್ಯಕ್ತಿಯ ಹಕ್ಕು, ಕಾರ್ಮಿಕರ ನಷ್ಟಪರಿಹಾರ ಅಧಿನಿಯಮ, 1923ರ (1923ರ ಅಧಿನಿಯಮ ಸಂಖ್ಯೆ 8) ಉಪಬಂಧಗಳಡಿಯಲ್ಲಿ ಅಥವಾ ನಷ್ಟ

ಪರಿಹಾರವನ್ನು ಕ್ಲೇಮು ಮಾಡಲು ಸದ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಯಾವುದೇ ಹಕ್ಕನ್ನು ಕ್ಲೇಮುದಾರನು ಹೊಂದಿದ್ದಾನೆಂಬ ಸಂಗತಿ ಮಾತ್ರದಿಂದಲೇ ಬಾಧಿತವಾಗಿಲ್ಲ. ಆದರೆ, ಯಾರೇ ವ್ಯಕ್ತಿಯು ಒಂದೇ ಅಪಘಾತಕ್ಕೆ ಸಂಬಂಧಿಸಿದಂತೆ, ಒಂದಕ್ಕಿಂತ ಹೆಚ್ಚು ಬಾರಿ ನಷ್ಟ ಪರಿಹಾರವನ್ನು ಕ್ಲೇಮು ಮಾಡಲು ಅರ್ಹನಾಗತಕ್ಕದ್ದಲ್ಲ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಕ್ಲೇಮುದಾರರು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದಡಿ ನಷ್ಟಪರಿಹಾರವನ್ನು ಈಗಾಗಲೇ ಕ್ಲೇಮು ಮಾಡಿದ್ದಲ್ಲಿ, ಮತ್ತು ಅದನ್ನು ಪಡೆದಿದ್ದಲ್ಲಿ, ಅವರು ರೈಲ್ವೆ ಅಧಿನಿಯಮ, 1989ರಡಿ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಕ್ಲೇಮನ್ನು ಸಮರ್ಥಿಸಲಾಗುವುದಿಲ್ಲ. ಅದೇ ರೀತಿಯಲ್ಲಿ, ಅದೇ ತರ್ಕದಿಂದ, ರೈಲ್ವೆ ಅಧಿನಿಯಮದ ಉಪಬಂಧಗಳಡಿ ನಷ್ಟ ಪರಿಹಾರಕ್ಕಾಗಿ ಕಾರ್ಮಿಕ ಅಥವಾ ಅವರ ಅವಲಂಬಿತರು ರೈಲ್ವೆ ಅಧಿನಿಯಮದಡಿ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಈಗಾಗಲೇ ಕ್ಲೇಮು ಮಾಡಿದ್ದಲ್ಲಿ, ಮತ್ತೊಮ್ಮೆ ನಷ್ಟ ಪರಿಹಾರವನ್ನು ಪಡೆಯಲು ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ಉಪಬಂಧಗಳಡಿ ಅದೇ ಅಪಘಾತಕ್ಕೆ ಸಂಬಂಧಿಸಿ ಮತ್ತೊಂದು ಕ್ಲೇಮು ಮಾಡಲು ಅವರಿಗೆ ಅನುಮತಿಸಲಾಗದು ಎಂದಾಗುತ್ತದೆ.

7. ಜೊತೆಗೆ, ಸದ್ಯದ ಪ್ರಕರಣದಲ್ಲಿ, ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದಡಿ ಏನನ್ನು ನೀಡಲಾಗಿದೆಯೋ ಅದು ರೈಲ್ವೆ ಅಧಿನಿಯಮದಡಿ ನೀಡಿದ್ದಕ್ಕಿಂತ ಕಡಿಮೆಯದ್ದಾಗಿದೆ. ಕ್ಲೇಮುದಾರನು ಕಾನೂನಿನ ವಿವಿಧ ಉಪಬಂಧಗಳಡಿ, ಉದ್ಯೋಗದಾತ ಅಥವಾ ಯಾವುದೇ ಇತರ ಶಾಸನಬದ್ಧ ಸಂಸ್ಥೆಯ ವಿರುದ್ಧ ಮುಂದುವರಿಯಲು ಇಚ್ಛಿಸಿದಾಗ ಅವರು ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ವಾಸ್ತವವಾಗಿ ಈ ಪ್ರಕರಣದಲ್ಲಿ ಕಾರ್ಮಿಕನ ಅವಲಂಬಿತರು ಕಾರ್ಮಿಕರ ನಷ್ಟಪರಿಹಾರ ಅಧಿನಿಯಮದಡಿ ಸದ್ಯದ ವ್ಯವಹರಣೆಗಳನ್ನು ಹೂಡುವುದಕ್ಕೆ ಮುಂಚೆ ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಕ್ಲೇಮು ಮಾಡಿರುತ್ತಾರೆ. ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣವು 2007ರ ವರ್ಷದಲ್ಲಿ ಸಲ್ಲಿಸಿದ ಪ್ರಕರಣದಲ್ಲಿ, 14.08.2009ರಷ್ಟು ಹಿಂದೆಯೇ

ಆದೇಶವನ್ನು ಹೊರಡಿಸಿತ್ತು. ಅದನ್ನು ಮುಚ್ಚಿಟ್ಟು, ಕಾರ್ಮಿಕರ ನಷ್ಟ ಪರಿಹಾರದ ಆಯುಕ್ತರ ಸಮಕ್ಷಮ ಹೊಸ ಕ್ಲೇಮನ್ನು ಮಾಡಲಾಗಿದೆ ಮತ್ತು ಐತೀರ್ಪನ್ನು ಹೊರಡಿಸಲಾಗಿದೆ. ಅದೇ ರೀತಿಯ ಸನ್ನಿವೇಶದಲ್ಲಿ ***ಶ್ರೀಮತಿ ಜೈಬುನ್ನೀಸಾ – ವಿರುದ್ಧ– ವಿಭಾಗೀಯ ಅಧೀಕ್ಷಕರು ದಕ್ಷಿಣ ರೈಲ್ವೆ, ಹುಬ್ಬಳ್ಳಿ***[1], ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಒಬ್ಬ ವ್ಯಕ್ತಿಯು ರೈಲು ಅಪಘಾತದಿಂದ ಸಂಭವಿಸಿದ ನಷ್ಟಕ್ಕಾಗಿ ರೈಲ್ವೆ ಅಧಿನಿಯಮದ 82ಎ ಪ್ರಕರಣದಡಿ ನಷ್ಟಪರಿಹಾರವನ್ನು ವಸೂಲು ಮಾಡಿದ್ದಲ್ಲಿ, ಅವನು ಅಥವಾ ಅವನು ಮೃತಪಟ್ಟ ಸಂದರ್ಭದಲ್ಲಿ ಅವನ ಉತ್ತರಾಧಿಕಾರಿಗಳು, ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದಡಿ, ಅಥವಾ ಅಂಥ ನಷ್ಟ ಪರಿಹಾರಕ್ಕೆ ಹಕ್ಕನ್ನು ಸೃಜಿಸುವ ಇತರ ಯಾವುದೇ ಕಾನೂನಿನಡಿ ಅದೇ ಅಪಘಾತಕ್ಕೆ ಸಂಬಂಧಪಟ್ಟಂತೆ ಮತ್ತೊಮ್ಮೆ ನಷ್ಟ ಪರಿಹಾರಕ್ಕೆ ಹಕ್ಕುಳ್ಳವರಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

8. ಈ ಮೇಲಿನದರ ಬೆಳಕಿನಲ್ಲಿ ಮತ್ತು ಕ್ಲೇಮುದಾರರು ರೈಲ್ವೆ ಕ್ಲೇಮುಗಳ ನ್ಯಾಯಾಧಿಕರಣದ ಸಮಕ್ಷಮದಲ್ಲಿ ಕ್ಲೇಮು ಮಾಡುವ ಮೂಲಕ ನಷ್ಟ ಪರಿಹಾರವನ್ನು ಪಡೆದಿದ್ದಾರೆಂದು ಅಂಗೀಕರಿಸಲಾದ ಸಂಗತಿಯ ದೃಷ್ಟಿಯಿಂದ ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ಉಪಬಂಧಗಳಡಿ ಕೋರುವ ಹೊಸ ಕ್ಲೇಮನ್ನು ಸಮರ್ಥಿಸಲಾಗದು. ಹೀಗಾಗಿ ಈ ಅಪೀಲನ್ನು ಪುರಸ್ಕರಿಸಲಾಗಿದೆ. ಪ್ರಶ್ನಿತ ಆದೇಶವನ್ನು ಬದಿಗಿರಿಸಲಾಗಿದೆ. ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ಉಪಬಂಧಗಳಡಿ ಸಲ್ಲಿಸಿದ ಕ್ಲೇಮು ಅರ್ಜಿಯನ್ನು ವಜಾ ಮಾಡಲಾಗಿದೆ.

---

1. ಎಐಆರ್ 1965 ಮೈಸೂರು 306 (ಸಂ.52 ಖ.80)